ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ**12.10.2022**

ಪಾಟೀ ಸವಾಲುಃ ಶ್ರೀ ಆರ್ ಕೆ ಎನ್ ವಕೀಲರಿಂದ

ವಾದಿ ಸಂಸ್ಥೆಯ ಪೂರ್ಣ ಇತಿಹಾಸದ ಬಗ್ಗೆ ನನಗೆ ವೈಯಕ್ತಿಕ ತಿಳುವಳಿಕೆ ಇದೆ. ಕುಶಾಲನಗರದಲ್ಲಿ ವಾದಿ ಸಂಸ್ಥೆ 1982 ರಲ್ಲಿ ಸ್ಥಾಪನೆಯಾಗಿದ್ದು, ದಿನಾಂಕ ಮತ್ತು ತಿಂಗಳು ನನಗೆ ನೆನಪಿಲ್ಲ. ಲಯನ್ಸ್ ಕ್ಲಬ್ ಹಾಗೂ ಲಯನ್ಸ್ ಚಾರಿಟಬಲ್ ಟ್ರಸ್ಟ್ ಒಂದೆ ಆಗಿರುತ್ತದೆ. ಲಯನ್ಸ್ ಕ್ಲಬ್ ಎನ್ನುವುದು ಅಂತರ್ ರಾಷ್ಟ್ರೀಯ ಸಂಸ್ಥೆಯಾಗಿದ್ದು, ವಾದಿ ಸಂಸ್ಥೆ ಸ್ಥಳೀಯ ಸಂಸ್ಥೆ ಎಂದರೆ ಸರಿಯಲ್ಲ. ಲಯನ್ಸ್ ಕ್ಲಬ್ ಸಂಸ್ಥೆಯು ಅಂತರ್ ರಾಷ್ಟ್ರೀಯ ಚಾರೀಟೆಡ್ ನಿಯಮಗಳಿಗೆ ಅನುಸಾರವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದರೆ ಸರಿ. ಸದ್ರಿ ನಿಯಮಗಳ ಪ್ರಕಾರವಾಗಿ ನಮಗೆ ಭಾರತೀಯ ನ್ಯಾಶ ಕಾಯ್ದೆಯಡಿಯಲ್ಲಿ ಚಾರಿಟಬಲ್ ಟ್ರಸ್ಟ್ ನ್ನು ನೋಂದಾಯಿಸಲು ಅಧಿಕಾರವಿಲ್ಲ ಎಂದರೆ ಸರಿಯಲ್ಲ.

ವಾದಿ ಸಂಸ್ಥೆಯಲ್ಲಿ ಇರುವಂತಹ ಸದಸ್ಯರು 1982 ರಲ್ಲಿ ನ್ಯಾಶ ಕಾಯ್ದೆಯಡಿಯಲ್ಲಿ ಒಂದು ಟ್ರಸ್ಟ್ ನ್ನು ನೋಂದಣಿ ಮಾಡಿಕೊಳ್ಳಲಾಗಿದೆ ಎಂದರೆ ಸರಿ. ಸದ್ರಿ ಟ್ರಸ್ಟ್ ನೋಂದಣಿಯಾದ ನಂತರ ಇಂದಿನ ದಿನದವರೆವಿಗೆ ಅಸ್ತಿತ್ವದಲ್ಲಿ ಇರುತ್ತದೆ. ಮೂಲ ನ್ಯಾಶದಾರಿಗಳು ಇಂದಿನ ದಿನದವರೆವಿಗೆ ನ್ಯಾಶದಾರಿಗಳಾಗಿ ಇರುವುದಿಲ್ಲ. ಸಾಕ್ಷಿ ಮುಂದುವರೆದ ಅದರಲ್ಲಿ ಕೆಲವರು ಮೃತಪಟ್ಟಿರುವುದಾಗಿ ನುಡಿಯುತ್ತಾರೆ. ದಿಃ 03.06.1982 ರಿಂದ ದಿಃ 11.09.2009 ರವರೆವಿಗೆ ವಾದಿ ಸಂಸ್ಥೆ ಚಿರ ಮತ್ತು ಚರಾಸ್ತಿಗಳನ್ನು ಹೊಂದಿತ್ತು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಿಪಿ-7 ಯಾವ ಎಂ ಆರ್ ಆಧಾರದ ಮೇಲೆ ವರ್ಗಾವಣೆಯಾಗಿದೆ ಎಂಬ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಹಕ್ಕು ವರ್ಗಾವಣೆ ಪತ್ರ ಮತ್ತು ಜಮಾ ಬಂಧಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-7 ಕ್ಕೆ ಸಂಬಂಧಿಸಿದಂತೆ ಎಂ ಆರ್ ಪ್ರತಿಯನ್ನು ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಿಪಿ-9 ನ್ನು ಭೂ ಪರಿವರ್ತನೆಗಾಗಿ ಮುಳ್ಳುಸೋಗೆ ಗ್ರಾಮ ಪಂಚಾಯ್ತಿಗೆ ಪಾವತಿಸಿರುವ ಶುಲ್ಕದ ರಶೀದಿಯಾಗಿರುತ್ತದೆ. ನಾನು ವಾದಿ ಸಂಸ್ಥೆಯ ಚೇರ್ಮನ್ ಆಗಿ 2011 ರಲ್ಲಿ ಅಧಿಕಾರ ವಹಿಸಿಕೊಂಡಿರುತ್ತೇನೆ. ನಾನು ಕುಶಾಲನಗರಕ್ಕೆ ಶಾಶ್ವತ ನಿವಾಸಿಯಾಗಿ 1996 ರಲ್ಲಿ ಬಂದಿರುತ್ತೇನೆ. ವಾದಿ ಸಂಸ್ಥೆಯಲ್ಲಿ ನಾನು ಸೇವೆ ಮಾಡಲು 1998 ರಲ್ಲಿ ಸೇರಿಕೊಂಡಿರುತ್ತೇನೆ. ವಾದಿ ಸಂಸ್ಥೆಯ ಕಛೇರಿ ಕುಶಾಲನಗರದ ಪಟ್ಟಣ ಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ. ದಾವಾಸ್ವತ್ತು ಮೊದಲು ಮುಳ್ಳುಸೋಗೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಇದ್ದು, ಪ್ರಸ್ತುತ ಅದು ಪಟ್ಟಣ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಬರುತ್ತದೆ. ಕುಶಾಲನಗರ ಪಟ್ಟಣ ಪಂಚಾಯ್ತಿಯ ಘೋಷಿತ ಪ್ರದೇಶ ಆಗಿರುವ ಬಗ್ಗೆ ನನಗೆ ಮಾಹಿತಿ ಇದೆ. ಸದ್ರಿ ಘೋಷಿತ ಪ್ರದೇಶ 1907 ರಿಂದ 1958 ರವರೆವಿಗೆ ಇತ್ತು ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ಸದ್ರಿ ಘೋಷಿತ ಪ್ರದೇಶ ಬ್ರಿಟೀಷರ ಕಾಲದಲ್ಲೆ ಪ್ರತ್ಯೇಕವಾದ ಗ್ರಾಮ ನಕಾಶೆ ಮಾಡಲಾಗಿತ್ತು ಎಂದರೆ ನನಗೆ ಮಾಹಿತಿ ಇಲ್ಲ. 1907 ರಲ್ಲೆ ದಾವಾಸ್ವತ್ತು ಕುಶಾಲನಗರದ ಘೋಷಿತ ಪ್ರದೇಶದಲ್ಲೆ ಇತ್ತು ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ. ದಾವಾಸ್ವತ್ತಿನ ಸರ್ವೆ ನಂಬರ್ಗೆ ಪರ್ಯಾಯಾವಾದಂತಹ ಘೋಷಿತ ಸರ್ವೆ ನಂಬರ್ ಸಹ ಇತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತು ಕುಶಾಲನಗರ ವ್ಯಾಪ್ತಿಯಲ್ಲಿ ಇದ್ದರೂ ಸಹ 5 ನೇ ಪ್ರತಿವಾದಿ ನಿರಾಕ್ಷೇಪಣಾ ಪತ್ರ ನೀಡುವುದಿಲ್ಲ ಎಂಬ ಕಾರಣಕ್ಕೆ ನಿಪಿ-10 ನ್ನು ಮುಳ್ಳುಸೋಗೆ ಗ್ರಾಮ ಪಂಚಾಯ್ತಿಯಿಂದ ಪಡೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ-10 ರ ಮೇಲೆ ಪರಿವರ್ತನಾ ಆದೇಶ ಪಡೆದಿರುವುದಿಲ್ಲ. ಪರಿವರ್ತನಾ ಆದೇಶ ಪಡೆಯದೇಯೆ ಏಕ ನಿವೇಶನಕ್ಕೆ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿ. ಯೋಜನಾ ಪ್ರಾಧಿಕಾರದಿಂದ ಏಕ ನಿವೇಶನಕ್ಕೆ ಅನುಮೋದನೆ ದೊರೆತಿರುವುದಿಲ್ಲ. ಮುಳ್ಳುಸೋಗೆ ಗ್ರಾಮ ಪಂಚಾಯ್ತಿಯಿಂದ ಹಕ್ಕು

ವರ್ಗಾವಣೆ ಪ್ರತಿ ಅಥವಾ ಜಮಾಬಂಧಿಯನ್ನು ಮಾಡಿಕೊಂಡಿರುವುದಿಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ಕುಶಾಲನಗರ ಪಟ್ಟಣ ಪಂಚಾಯ್ತಿಗೆ ಸ್ವಯಂ ಘೋಷಿತ ಆಸ್ತಿ ವಿವರಣೆ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ.

ದಾವಾಸ್ವತ್ತು ಒಟ್ಟು 4 ಎಕ್ರೆ 91 ಸೆಂಟ್ ವಿಸ್ತೀರ್ಣವಿರುತ್ತದೆ. ಸರ್ವೆ ನಂಬರ್ 68 ರಲ್ಲಿ ಒಂದು ಎಕ್ರೆ ಜಾಗವನ್ನು ದುರಸ್ತಿ ಮಾಡಿಕೊಂಡಿರುವ ಬಗ್ಗೆ ಗ್ರಾಮ ನಕಾಶೆ ಅಥವಾ ಆಕಾರ್ ಬಂದ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ-5 ರಲ್ಲಿ ನಮೂದಿಸಿರುವ ಚೆಕ್ಕುಬಂಧಿ ಒಂದು ಎಕ್ರೆಗೆ ಸಂಬಂಧಿಸಿದ ಚೆಕ್ಕು ಬಂಧಿ ಎಂದರೆ ಸರಿ. ಪೂರ್ವಕ್ಕೆ ಸರ್ವೆ ನಂಃ 68 ರ ಉಳಿಕೆ ಭಾಗ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಖಾಸಗಿ ನಿವೇಶನ, ದಕ್ಷಿಣಕ್ಕೆ ಸರ್ವೆ ನಂಃ 68 ರ ಉಳಿಕೆ ಜಮೀನು ಇರುತ್ತದೆ. ಸದ್ರಿ ಚೆಕ್ಕುಬಂಧಿಗೆ ಸಂಬಂಧಿಸಿದಂತೆ ದೃಡೀಕೃತ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. ಸದ್ರಿ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಾವಾಸ್ವತ್ತನ್ನು ನಿಪಿ-5 ರ ಪ್ರಕಾರ ರಾಜ್ಯ ಸರ್ಕಾರ ಕಣ್ಣಿನ ಆಸ್ಪತ್ರೆಗಾಗಿ ಮಾರಾಟ ಮಾಡಲಾಗಿದೆ. ದಿಃ 24.01.1991 ರಿಂದ ದಾವಾಸ್ವತ್ತಿನಲ್ಲಿ ಇಂದಿನ ದಿನಾಂಕದವರೆವಿಗೆ ಕಣ್ಣಿನ ಆಸ್ಪತ್ರೆಯನ್ನು ತೆರೆಯಲಾಗಿದೆಯೆ ಎನ್ನುವ ಪ್ರಶ್ನೆಗೆ ಸಾಕ್ಷಿ 1993 ರ ನಂತರ ಆಸ್ಪತ್ರೆಗೆ ಪಾಯಾ ಹಾಕಿದ್ದು, ಅದು ಇನ್ನು ಪೂರ್ಣಗೊಂಡಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಅಂತರ್ ರಾಷ್ಟ್ರೀಯ ಸಂಸ್ಥೆಗಳು ಸಮಯ ನಿಯೋಜಿತ ಆಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತವೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ನಮ್ಮ ಸಂಸ್ಥೆ ಪಡೆದುಕೊಳ್ಳುವ ಉದ್ದೇಶದಿಂದ ನಿಗಧಿತ ಸಮಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-5 ರಲ್ಲಿ ಕಾಣಿಸಿರುವ ಪ್ರತಿಫಲದ ಮೊತ್ತ ರಿಯಾಯಿತಿ ದರದ ಮೊತ್ತ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಎರಡುವರೆ ಕೋಟಿ ರೂ.ಗಳ ಅಂದಾಜು ಮೌಲ್ಯಕ್ಕೆ ಅಡಿಪಾಯವನ್ನು ಹಾಕಲಾಗಿದೆ. ಅದಕ್ಕೆ ಸಂಬಂಧಿಸಿದಂತೆ ನೀಲಿ ನಕಾಶೆ, ಅಂದಾಜು

ಯೋಜನಾಪಟ್ಟಿ, ನಮ್ಮ ಸಂಸ್ಥೆಯ ನಡವಳಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಡಿಪಾಯಕ್ಕೆ ಸಂಬಂಧಿಸಿದಂತೆ ವೆಚ್ಚವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾಸ್ವತ್ತಿನಲ್ಲಿ ಯಾವುದೆ ಖರ್ಚು ಮಾಡದ ಕಾರಣ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-5 ಷರತ್ತು ಬದ್ಧ ಕ್ರಯ ಸಾಧನವನ್ನು ನಮ್ಮ ಸಂಸ್ಥೆ ಪರಿಪಾಲನೆ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಕಣ್ಣಿನ ಆಸ್ಪತ್ರೆ ಮಾಡಿದ್ದಲ್ಲಿ ನಿರೀಕ್ಷಿತ ರೋಗಿಗಳು ಬರುವುದಿಲ್ಲ ಎಂಬ ಕಾರಣಕ್ಕೆ ಅದನ್ನು ಪೂರ್ಣಗೊಳಿಸಿಲ್ಲ ಎಂದರೆ ಸರಿಯಲ್ಲ. ಕುಶಾಲನಗರದಲ್ಲಿ 100 ಹಾಸಿಗೆಯ ಆಸ್ಪತ್ರೆ ಆಗುವ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾಸ್ವತ್ತಿನಲ್ಲಿ ಷರತ್ತಿನಂತೆ ಆಸ್ಪತ್ರೆ ನಿರ್ಮಿಸಿದ ಕಾರಣ ಸಾರ್ವಜನಿಕರ ಅನುಕೂಲಕ್ಕಾಗಿ 100 ಹಾಸಿಗೆಯ ಆಸ್ಪತ್ರೆಯನ್ನು ತೆರೆಯುವ ಕಾರಣಕ್ಕೆ ದಾವಾಸ್ವತ್ತನ್ನು ವಶಪಡಿಸಿಕೊಳ್ಳಲು ನಡವಳಿ ಮಾಡಲಾಗಿದೆ ಎಂದರೆ ಸಾಕ್ಷಿ ಸದ್ರಿ ನಡವಳಿ ಕಾನೂನು ಬದ್ಧವಾಗಿಲ್ಲ ಎಂದು ನುಡಿಯುತ್ತಾರೆ. ಸದ್ರಿ ನಡವಳಿ ಆಗಿರುವ ಬಗ್ಗೆ ನನಗೆ ತಿಳಿದ ನಂತರ ಕಂದಾಯ ಇಲಾಖೆಯವರಿಗೆ ಆಮೀಷ ಒಡ್ಡಿ ನಿಪಿ-7 ನ್ನು ತಯಾರಿಸಲಾಗಿದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿರುತ್ತಾರೆ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.

Pw-1

Pw-1